MANUVIKASA
Success Stories

# ಭೂರಹಿತ ಕುಟುಂಬಕ್ಕೆ ಫಾಸ್ಟ್ ಫುಡ್ ಆಸರೆ

***ಸಾರಾಂಶ:*** *ಮನು ವಿಕಾಸ ಸಂಘಕ್ಕೆ ಸೇರಿದ ನಂತರ ಉದ್ದಿಮೆ ಸ್ಥಾಪಿಸುವ ಉತ್ತೇಜನ ಹಾಗೂ ಹಣಕಾಸು ಸೌಕರ್ಯ ದೊರೆತು, ಅಲ್ಪಕಾಲದಲ್ಲಿಯೇ ಯಶಸ್ಸಿನ ಹಾದಿ ಹಿಡಿದ ಗೃಹಿಣಿ ಒಬ್ಬರ ಕಥನವಿದು. ಎರಡು ವರ್ಷಗಳ ಹಿಂದೆ ಮನೆಯಲ್ಲಿ ಒಂದು ಪೈಸೆ ದುಡಿಮೆಯೂ ಇಲ್ಲದ ಇವರ ಈಗಿನ ತಿಂಗಳ ಆದಾಯ ಮುಕ್ಕಾಲು ಲಕ್ಷ.*

ರೂಪಾ ಅವರು 10ನೇ ತರಗತಿ ಓದಿದ್ದಾರೆ. ಧಾರವಾಡ ತಾಯಿಯ ಮನೆ. ಪತಿ ಸುರೇಶ್ ಪಾಳ ಗ್ರಾಮದಲ್ಲಿ ಕಟಿಂಗ್ ಶಾಪ್ ನಡೆಸುತ್ತಾರೆ. ಈ ದಂಪತಿಗಳಿಗೆ ಮೂರು ಜನ ಮಕ್ಕಳು. ಎರಡು ಹೆಣ್ಣು ಮತ್ತು ಒಂದು ಗಂಡು. ಇವರದು ಭೂರಹಿತ ಕುಟುಂಬ. ಗಂಡ ಸುರೇಶ್ ಪಾಳ ಗ್ರಾಮದ ಬಸ್ ನಿಲ್ದಾಣದಲ್ಲಿ ಕ್ಷೌರಿಕ ವೃತ್ತಿ ಮಾಡುತ್ತಿದ್ದಾರೆ. ಅವರ ಆದಾಯದಿಂದಲೇ ಇಡೀ ಸಂಸಾರ ನಡೆಯುತ್ತಿತ್ತು. ರೂಪಾ ಮದುವೆಯಾಗಿ ಬಂದ ನಂತರ ಮಕ್ಕಳನ್ನು ನೋಡಿಕೊಳ್ಳುವುದು ಹಾಗೂ ಮನೆ ನಿರ್ವಹಣೆಯಲ್ಲೇ ಕಾಲ ಕಳೆಯುತ್ತಿದ್ದರು. ಊರಿನಲ್ಲಿ ಇವರಿಗೆ ಇದ್ದ ಸ್ವಂತ ಆಸ್ತಿ ಎಂದರೆ ತಗಡಿನ ಶೀಟು ಹೊದಿಸಿದ ಒಂದು ಪುಟ್ಟ ಮನೆ ಮಾತ್ರ. ಸ್ಪರ್ಧೆ ಹೆಚ್ಚಾಗಿದ್ದರಿಂದ ಸುರೇಶ್ ಅವರ ವೃತ್ತಿಯೂ ಸಹ ಏರುಗತಿಗಿಂತ ಇಳಿಗತಿಯಲ್ಲೇ ಸಾಗಿತ್ತು. ಸಂಸಾರದಲ್ಲಿ ಖರ್ಚುಗಳು ಹೆಚ್ಚುತ್ತಿದ್ದವೇ ವಿನಃ ಆದಾಯ ಮಾತ್ರ ಕಡಿಮೆಯಾಗುತ್ತಲೇ ಇತ್ತು.




**ಸ್ವಸಹಾಯ ಸಂಘದ ಪ್ರೇರಣೆ:**

ಹೀಗಿರುವಾಗ ರೂಪಾ ಅವರು ಎರಡು ವರ್ಷಗಳ ಹಿಂದೆ ಮನು ವಿಕಾಸ ಸಂಸ್ಥೆಯ 'ಕೃತಿ ಮನು ವಿಕಾಸ ಸ್ವಸಹಾಯ ಸಂಘ'ದ ಸದಸ್ಯರಾದರು. 10 ಹೆಣ್ಣು ಮಕ್ಕಳು ಸೇರಿ ರಚನೆಯಾಗಿದ್ದ ಸಂಘ ಅದಾಗಿತ್ತು. ಸಂಘದಲ್ಲಿದ್ದ ಹೆಣ್ಣುಮಕ್ಕಳು ಟೈಲರಿಂಗ್, ಬಟ್ಟೆ ವ್ಯಾಪಾರ, ಪಾತ್ರೆ ಅಂಗಡಿ ಇತ್ಯಾದಿ ಹಲವು ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದರು. ಆ ಸದಸ್ಯರ ಜೊತೆ ಒಡನಾಟ ಶುರುವಾದ ಬಳಿಕ ರೂಪಾ ಅವರಲ್ಲಿಯೂ ಸಹ ಏನಾದರೂ ಒಂದು ವ್ಯಾಪಾರ ಮಾಡುವ ಬಯಕೆ ಚಿಗುರೊಡೆಯಿತು. ಇದಕ್ಕೆ ಪೂರಕವಾಗಿ ಮನು ವಿಕಾಸ ಸಂಸ್ಥೆಯ ಸಿಬ್ಬಂದಿಗಳೂ ಉತ್ತೇಜನ ನೀಡಿದರು, ಜೊತೆಗೆ ಸಂಘದಿಂದ ಸಾಲ–ಸೌಲಭ್ಯವೂ ದೊರೆಯುವ ಭರವಸೆ ದೊರೆಯಿತು.

**ಕೈಹಿಡಿಯದ ಇಡ್ಲಿ–ದೋಸೆ:**

ಏನು ವ್ಯಾಪಾರ ಮಾಡಬೇಕೆಂದು ಚರ್ಚೆ ಬಂದಾಗ ಗಂಡನ ಅಂಗಡಿ ಪಕ್ಕದಲ್ಲೇ ಸ್ಥಳಾವಕಾಶ ಲಭ್ಯವಿದ್ದು ಅಲ್ಲಿ ಒಂದು ತಾತ್ಕಾಲಿಕ ಶೆಡ್ ಹಾಕಿ ಇಡ್ಲಿ–ದೋಸೆ ಮಾಡುವ ಹೋಟೆಲ್ ಆರಂಭಿಸುವ ಸಲಹೆಗಳು ಬಂದವು. ಅದು ರೂಪಾ ಅವರಿಗೂ ಸೂಕ್ತವೆನಿಸಿ ಒಂದು ಶುಭ ದಿನದಂದು ಹೋಟೆಲ್ ಆರಂಭಿಸಿಯೇಬಿಟ್ಟರು.

ಆದರೆ ಇವರ ಉತ್ಸಾಹ ಒಂದೇ ವಾರಕ್ಕೆ ಇಳಿದುಹೋಯಿತು. ಕಾರಣ, ಇಡ್ಲಿ–ದೋಸೆ ಮಾಡುವ ಹಲವು ಹೋಟೆಲ್ಲುಗಳು ಅದಾಗಲೇ ಇದ್ದವು ಮತ್ತು ಸಣ್ಣ ಗ್ರಾಮವಾದ್ದರಿಂದ ಹೆಚ್ಚು ಗ್ರಾಹಕರನ್ನು ಸೆಳೆಯಲು ಸಾಧ್ಯವಾಗಲಿಲ್ಲ. ಆದರೆ ಶೆಡ್ ನಿರ್ಮಾಣವಾಗಿದೆ,  ಕೆಲವು ಪಾತ್ರೆಗಳನ್ನೂ ಖರೀದಿಸಿಯಾಗಿದೆ. ಏನು ಮಾಡುವುದೆಂದು ಯೋಚಿಸುತ್ತಿದ್ದಾಗ ರೂಪಾ ಅವರ ಸಹೋದರ ಬಸವರಾಜು ಫಾಸ್ಟ್ ಫುಡ್ ಅಂಗಡಿ ಮಾಡಲು ಸಲಹೆ ಕೊಟ್ಟರು. ಅಲ್ಲದೆ ಅವರಿಗೆ ಫಾಸ್ಟ್ ಫುಡ್ ಅಂಗಡಿಗಳಲ್ಲಿ ಲಭ್ಯವಿರುವಕೆಲವು ತಿನಿಸುಗಳನ್ನು ತಯಾರಿಸುವ ಅನುಭವ ಅವರಿಗೆ ಇದ್ದುದರಿಂದ ಆರಂಭದಲ್ಲಿ ಸಹಾಯ ಮಾಡುವುದಾಗಿಯೂ ತಿಳಿಸಿದರು.



**ತಮ್ಮನ ಸಲಹೆ; ಕೈಹಿಡಿದ ಫಾಸ್ಟ್ ಫುಡ್:**

ಸ್ವಲ್ಪ ಅನುಮಾನದಿಂದಲೇ ಫಾಸ್ಟ್ ಫುಡ್ ಹಾಗೂ ಚಾಟ್ಸ್ ವ್ಯವಹಾರಕ್ಕೆ ಕೈಹಾಕಿದರು ರೂಪಾ. ಅವರಿಗೇ ಅಚ್ಚರಿಯಾಗುವಂತೆ ಒಂದೆರಡು ದಿನಗಳಲ್ಲೇ ಗ್ರಾಹಕರು ಬರಲಾರಂಭಿಸಿದರು. ಆರಂಭದಲ್ಲಿ ಸಂಜೆ ಮಾತ್ರ ವ್ಯಾಪಾರವಾಗುತ್ತದೆ ಎಂಬ ನಂಬಿಕೆ ಇತ್ತು. ಆದರೆ ಬೆಳಿಗ್ಗೆಯಿಂದಲೇ ಜನ ಇವರು ತಯಾರಿಸುವ ಗೋಬಿ ಮಾಂಚೂರಿ, ಮಶ್ರುಮ್ ಮಂಚೂರಿ, ಮೊಟ್ಟೆಯ ವಿವಿಧ ಪದಾರ್ಥಗಳು ಇತ್ಯಾದಿಗಳನ್ನು ಸವಿಯತೊಡಗಿದರು. ತಿಂಗಳೊಪ್ಪತ್ತಿನಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಾಯಿತು. ಸ್ಥಳಾವಕಾಶ ಸಾಲದೆ ಶೆಡ್ ಅನ್ನು ವಿಸ್ತರಿಸಿದರು. ಇದಕ್ಕಾಗಿ ಬ್ಯಾಂಕಿನಿಂದ ಒಂದು ಲಕ್ಷ ಸಾಲ ಪಡೆದರು. ಅದರಲ್ಲಿ ಹೋಟೆಲ್ಲಿಗೆ ಬೇಕಾದ ಖುರ್ಚಿ–ಬೆಂಚುಗಳು, ಹೆಚ್ಚಿನ ಪ್ರಮಾಣದ ಪಾತ್ರೆಗಳು, ಕಚ್ಚಾ ಪದಾರ್ಥಗಳನ್ನು ಖರೀದಿಸಲು ಈ ಸಾಲವನ್ನು ವಿನಿಯೋಗಿಸಲಾಯಿತು.

**‘0’ಯಿಂದ ‘2500’ ದುಡಿಮೆಯತ್ತ:**

ಪ್ರಸ್ತುತ (ಜುಲೈ 2022) ಈ ವಹಿವಾಟು ಆರಂಭವಾಗಿ ಎರಡು ವರ್ಷಗಳಾಗಿದ್ದು ದಿನದ ಸರಾಸರಿ ಆದಾಯ 2500 ರೂ. ಎನ್ನುತ್ತಾರೆ ರೂಪಾ. ಅದರಲ್ಲಿ ಖರ್ಚು–ವೆಚ್ಚಗಳನ್ನು ಕಳೆದು 1500 ರೂ. ನಿವ್ವಳ ಆದಾಯ ದೊರೆಯುತ್ತಿದೆ. ಈಗ ರೂಪಾ ಒಬ್ಬರೇ ಚಾಟ್ಸ್ ಅಂಗಡಿಯನ್ನು ನಿರ್ವಹಿಸುತ್ತಾರೆ. ಆರಂಭದಲ್ಲಿ ಜೊತೆಗಿದ್ದ ಸಹೋದರ ಬಸವರಾಜು ಈಗ ಆಗಾಗ ಬಂದು ಸಲಹೆಗಳನ್ನು ನೀಡುತ್ತಾರೆ.



ಮನೆಯಲ್ಲೇ ಕುಳಿತು ಕೇವಲ ಅಡುಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು ಇತ್ಯಾದಿ ಕೆಲಸಗಳನ್ನಷ್ಟೇ ಮಾಡುತ್ತಿದ್ದ ರೂಪಾ ಈಗ ರುಚಿಕಟ್ಟಾಗಿ ಹತ್ತಾರು ಚಾಟ್ಸ್ ಗಳನ್ನು ಚಕಚಕನೆ ತಯಾರಿಸುವ ಚಾಕಚಕ್ಯತೆ ಗಳಿಸಿದ್ದಾರೆ. ಗ್ರಾಮದಲ್ಲಿ ಯತೇಚ್ಛ ಮಾವಿನ ತೋಟಗಳಿರುವುದರಿಂದ ಮಾವು ಹಣ್ಣಿನ ಸೀಸನ್ನಿನಲ್ಲಿ ಹೊರಗಡೆಯಿಂದ ಕೂಲಿಕಾರರು ಬಂದು ತಿಂಗಳುಗಟ್ಟಳೆ ಇಲ್ಲಿ ವಾಸಿಸುತ್ತಾರೆ. ಆ ಸಂದರ್ಭದಲ್ಲಿ ಇವರ ವಹಿವಾಟು ದುಪ್ಪಟ್ಟಾಗುತ್ತದೆಯಂತೆ.

**2021ನೇ ವರ್ಷದ ಇವರ ವಹಿವಾಟಿನ ವಿವರಗಳನ್ನು ಕೋಷ್ಟಕದಲ್ಲಿ ಗಮನಿಸಿ;**

| ಒಂದು ದಿನದ ಆದಾಯ | ಒಂದು ದಿನದ ನಿವ್ವಳ ಆದಾಯ | ತಿಂಗಳ ಆದಾಯ | ತಿಂಗಳ ನಿವ್ವಳ ಆದಾಯ | ವಾರ್ಷಿಕ ಆದಾಯ | ವಾರ್ಷಿಕ ನಿವ್ವಳ ಆದಾಯ |
|---|---|---|---|---|---|
| 2500 | 1500 | 75,000 | 45,000 | 9,00,000 | 5,40,000 |

“10ನೇ ತರಗತಿ ಓದಿರುವ ರೂಪಾ ಅವರ ವಾರ್ಷಿಕ ಆದಾಯವು ಇಂಜಿನಿಯರ್ ಅಥವಾ ಯಾವುದೇ ಮಧ್ಯಮ ಮಟ್ಟದ ನೌಕರಿ ಮಾಡುವವರ ಸಂಬಳದ ಪ್ಯಾಕೇಜಿಗೆ ಸಮ ಆಗಿರುವುದು ಗಮನಾರ್ಹ” ಎಂದು ಅಚ್ಚರಿ ಪಡುತ್ತಾರೆ ಮನು ವಿಕಾಸ ಸಂಸ್ಥೆಯ ಶ್ರೀ ಗಣಪತಿ ಹೆಗಡೆ. ಇವರ ಮೂಲ ಬಂಡವಾಳವೂ ಸಹ ಒಂದು ಲಕ್ಷವನ್ನು ದಾಟದಿರುವುದು ಗಮನಾರ್ಹ.

**ಪತಿಯ ಬೆಂಬಲ:**
ಗಂಡನ ಅಂಗಡಿಯೂ ಪಕ್ಕದಲ್ಲೇ ಇದ್ದು, ಅವರೂ ಸಹ ಸದಾ ಅಂಗಡಿಯಲ್ಲಿ ಇರುವುದರಿಂದ ಪರಸ್ಪರ ಧೈರ್ಯ ಹಾಗೂ ಸಹಕಾರಗಳಿವೆ. ಪತ್ನಿಯ ಈ ಸಾಹಸಕ್ಕೆ ಸುರೇಶ್ ಅವರ ಸಂಪೂರ್ಣ ಬೆಂಬಲ ಇದೆ. ಒಮ್ಮೆಗೇ ತಮಗೆ ಸಂಪೂರ್ಣ ಹೊಸದಾದ ವ್ಯವಹಾರವೊಂದನ್ನು ಶುರು ಮಾಡಿ ಯಶಸ್ಸು ಕಂಡಿರುವುದು ರೂಪಾ ಅವರಿಗೇ ಅಚ್ಚರಿ ತಂದಿದೆ. ರುಚಿ, ಗುಣಮಟ್ಟ ಹಾಗೂ ಉತ್ತಮ ಗ್ರಾಹಕ ಸೇವೆ ಇವರ ಯಶಸ್ಸಿನ ಮೂಲಗಳಾಗಿವೆ. ಅಂಗಡಿಯನ್ನು ಇನ್ನಷ್ಟು ವ್ಯವಸ್ಥಿತವಾಗಿ ಮಾಡಬೇಕು ಎನ್ನುತ್ತಾರೆ ರೂಪಾ.

**ಉಳಿತಾಯದತ್ತ ಗಮನ:**
ವಹಿವಾಟು ಚೆನ್ನಾಗಿ ನಡೆಯಲು ಶುರುವಾದ ತಕ್ಷಣ ರೂಪಾ ಉಳಿತಾಯ ಮಾಡುವತ್ತ ಗಮನಹರಿಸಿದರು. ಸ್ವಸಹಾಯ ಸಂಘದಲ್ಲಿ ಪ್ರತಿ ತಿಂಗಳು 300 ರೂ. ಕಟ್ಟಿದರೆ ಪ್ರತಿ ದಿನ ಪಿಗ್ಮಿ ರೂಪದಲ್ಲಿ 400 ರೂ. ಉಳಿತಾಯ ಮಾಡುತ್ತಿದ್ದಾರೆ. ಸುಸಜ್ಜಿತ ಮನೆ ಕಟ್ಟಬೇಕೆಂಬ ಯೋಜನೆ ಹಾಕಿಕೊಂಡಿದ್ದು ಈಗ ಅದರ ಕೆಲಸಗಳನ್ನು ಆರಂಭಿಸಿದ್ದಾರೆ. ಮನೆ ಕಟ್ಟಲು 15 ಲಕ್ಷ ರೂ. ಗಳ ಅಗತ್ಯ ಇರುವುದಾಗಿ ತಿಳಿಸುತ್ತಾರೆ. ಜತೆಗೆ ಮಕ್ಕಳ ವಿದ್ಯಾಭ್ಯಾಸವೂ ನಡೆಯುತ್ತಿದೆ. ಬ್ಯಾಂಕಿನಿಂದ ಪಡೆದ ಸಾಲವನ್ನು ಮರುಪಾವತಿ ಮಾಡುತ್ತಿದ್ದು ಇನ್ನು ಸ್ವಲ್ಪ ಮಾತ್ರ ಬಾಕಿ ಇದೆ.

ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಹಾಗೂ ವೈವಿಧ್ಯಮಯ ಆಹಾರ ಪದಾರ್ಥಗಳ ತಯಾರಿಕೆ ಹಾಗೂ ಹೈನುಗಾರಿಕೆ ತರಬೇತಿ ಪಡೆಯಬೇಕೆಂಬುದು ಇವರ ನಿರೀಕ್ಷೆಗಳು.

**ವಿಳಾಸ:**
ರೂಪಾ ಸುರೇಶ್ ದೋತ್ರ
ಪಾಳ
ಮುಂಡಗೊಡ ತಾಲ್ಲೂಕು